ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಚನ್ನಪಟ್ಟಣ

CC No. 367/2017

PW - 1

(ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು. ಅನುಮತಿಸಲಾಯಿತು). ದಿನಾಂಕ 17.08.2019

ಪಾಟೀ ಸವಾಲು : ಶ್ರೀ. ಸಿ.ಎಂ.ಕೆ. ವಕೀಲರಿಂದ :

ನಾನು 7 ನೇ ತರಗತಿಯವರೆಗೆ ಓದಿದ್ದೇನೆ. ನಾನು ಸುಮಾರು 10 ವರ್ಷ ಗಳಿಂದ ಬ್ಯಾಂಕ್ ಅಕೌಂಟ್ ಅನ್ನು ಹೊಂದಿದ್ದೇನೆ. ಸದರಿ ಖಾತೆ ಉಳಿತಾಯ ಖಾತೆಯಾಗಿರುತ್ತದೆ. ನಾನು ಸಾಲ ಕೊಟ್ಟಿದ್ದೇನೆ ಎಂದು ಹೇಳಿದ ದಿನಾಂಕದಂದು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ. ನಾನು ಎರಡು ಬಾರಿ ನನ್ನ ಮನೆಯಲ್ಲಿ ಸಾಲ ಕೊಟ್ಟಿದ್ದು ಆಗ ಯಾರು ಇರಲಿಲ್ಲ. ನನ್ನ ಪ್ರಕಾರ ನಾನು ಸಾಲದ ಹಣವನ್ನು ಕೊಟ್ಟೆದ್ದೆ ಎಂದು ಹೇಳಿದ್ದೇನೆ ಆ ದಿನ ಬೇರೆ ಯಾರು ನೋಡಿಲ್ಲ ಎಂದರೆ ಸರಿ. ನಾನು ಸಾಲ ಕೊಟ್ಟಾಗ ಎರಡು ಚೆಕ್ ಅನ್ನು ಪಡೆದುಕೊಂಡಿರುತ್ತೇನೆ. ಎರಡು ಚೆಕ್ ಗಳ ಜೊತೆಗೆ ಒಂದು ಪತ್ರವನ್ನು ಸಹ ಪಡೆದುಕೊಂಡಿರುತ್ತೇನೆ. ನಿಪಿ-1 ಮತ್ತು 2 ರಲ್ಲಿ ಬರವಣಿಗೆ ಮತ್ತು

ಸಹಿ ಬೇರೆ ಬೇರೆ ಇಂಕ್ ನಲ್ಲಿದೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಾನು ಆರೋಪಿಗೆ ಬಡ್ಡಿಗಾಗಿ ಹಣವನ್ನು ನೀಡಿಲ್ಲ. ನಾನು ಎರಡು ಬಾರಿ ಸಾಲ ಕೊಟ್ಟಾಗ ಉಳಿತಾಯ ಖಾತೆಯಿಂದ ಹಣವನ್ನು ತೆಗೆದಿದ್ದೇನೆ ಎಂದು ಪೋಲೀಸರಿಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಬ್ಯಾಂಕ್ನಲ್ಲಿ ಉಳಿತಾಯ ಖಾತೆಯಲ್ಲಿ ಹಣ ಇದ್ದ ಸಂದರ್ಬದಲ್ಲಿ ಬಡ್ಡಿ ಬರುತ್ತದೆ ಎಂದು ನನಗೆ ಗೊತ್ತು. ನಿಪಿ-1 ಮತ್ತು 2 ಚೆಕ್ನಲ್ಲಿ ಬರೆದಿರುವ ಬರವಣಿಗೆ ಮತ್ತು ನಿಪಿ-3 ಮತ್ತು 4 ರಲ್ಲಿರುವ ಬರವಣಿಗೆಯ ಬರಹ ಒಂದೇ ಆಗಿರುತ್ತದೆ ಅಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ ಅವುಗಳು ಒಂದೇ ಪೆನ್ನಿನ ಬರವಣಿಗೆ ಇದೆ ಎಂದರೆ ಸರಿ.

ನನ್ನ ಪ್ರಮಾಣಪತ್ರದಲ್ಲಿರುವ ವಿಚಾರ ನನಗೆ ಗೊತ್ತು. ಆರೋಪಿಯು ಮಗನ ಮದುವೆ ಪೆಬ್ರವರಿ 2014 ನೇ ಇಸವಿಯಲ್ಲಿತ್ತು. 20.01.2014 ಮತ್ತು 15.03.2014 ರಂದು ನಾನು ಆರೋಪಿಗೆ ಸಾಲ ಕೊಟ್ಟಿದ್ದೇನೆ ಎಂದು ಹೇಳಿದ ದಿನಾಂಕದಂದು ನನಗೆ ಅಷ್ಟು ಹಣ ಕೊಡುವ ಆರ್ಥಿಕ ಸಾಮರ್ಥ್ಯ  ಇರಲಿಲ್ಲ ಎಂದರೆ ಸರಿಯಲ್ಲ. ನಾನು ಗೃಹಿಣಿ ಎಂದರೆ ಸರಿ. ನನಗೆ ಯಾವುದೇ ಸ್ವತಃ ವರಮಾನ ಇಲ್ಲ ಎಂದರೆ ಸರಿ. ಸಾಮಾನ್ಯವಾಗಿ ನನಗೆ ಹಣ ಕೊಡುವಾಗ ನಾನು ಅದನ್ನು

ಉಳಿತಾಯ ಖಾತೆಗೆ ಜಮಾ ಮಾಡುತ್ತೇನೆ ಎಂದರೆ ಸರಿ. ಜನವರಿ 2014 ರಲ್ಲಿ ಆರೋಪಿ ನನ್ನ ಬಳಿ ಅವರ ಮಗನ ಮದುವೆಗಾಗಿ ಹಣ ಕೇಳಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ